persons and they own other lands, why don't you take steps to evict them ?

ಶ್ರೀ ಎಂ. ವಿ. ಕೃಷ್ಣಪ್ಪ.—ಯಾರೂ ಆ ಭಾಗದಲ್ಲಿ ಕೇಳಬೇ ಇದ್ದರೆ wealthy ಪಟೇಲರು ಜಮೀನು ಮಾಡುತ್ತಿರುತ್ತಾರೆ. ನನ್ನ ಗಮನಕ್ಕೆ ಅಂತಹ ಕೇಸುಗಳು ಕೆಲವು ಬಂದಿವೆ. ಆದರೆ ಅ೯ ಆತರ್ಮೈಡ್ಡ ಕಲ್ಪ ವೇಷನ್ನಿಗೆ ನಾವು ಅರೊ ಮಾಡಿದ್ದೇವೆಂಬುದಾಗಿ ದೂರು ಬಂದಿದ್ದೇ ಆದರೆ ಅಥವಾ ಎ೯ಕ್ರೋಜ್‌ಮೆಂಟ್ ಸ್ವಲ್ಪ ಏನಾದರೂ ಇದ್ದರೆ, ಅಯ್ಯೋ, ಪಾಪ, ಎಂದು ಅಂತಹವರಿಗೆ ಭೂಮಿಯನ್ನು ಕೊಡುತ್ತೇವೆ. ದರ ಖಾನ್ತು ಅರ್ಜಿಯನ್ನು ತಹಸೀಲ್‌ದಾರರಿಗೆ ಕೊಟ್ಟಾದ ಮೇಲೆ ಜಮೀನನ ್ನ ಉಳುಮೆಮಾಡುವವರಿಗೆ ಅರೊ ಮಾಡುತ್ತೇವೆ.

ಶ್ರೀ. ಎಸ್. ಎಂ. ಕೃಷ್ಣ.— ರೂಲ್ಸ್‌ಪ್ರಕಾರ ಅರೊ ಮಾಡಿದ್ದಾದರೆ ವೆಲ್ತ ಪಟೇಲರು, ಶ್ಯಾನುಬೋಗರು ಹೇಗೆ ಜಮೀನು ಮಾಡಬೇಕು ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದೆರ್ಲಾ ಹಳ್ಳಿಗಳಲ್ಲಿ ನಡೆಯುವ ವಿಷಯ. ಇಂತಹ ಕೇಸುಗಳು ಅಮರ್ಲಾರರ ಗಮನಕ್ಕೆ ಬಂದ ತಕ್ಷಣ ರೂಲ್ಸ್ ಪ್ರಕಾರ ಅವನ್ನು ಅವರು ಕ್ಯಾನ್ಸಲ್ ಮಾಡುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಬಗ್ಗೆ ನೀವು ಏನು ಕ್ರಮಗಳನ್ನು ತೆಗೆದುಕೊಂಡಿದ್ದೀರಿ ?

Sri M. V. KRISHNAPPA.—After all the country has to grow more food and there is no need to punish people ಇದು ದೇಶದಲ್ಲಿ ಹೆಚ್ಚಾಗಿ ಆಹಾರ ಬೆಳೆಯತಕ್ಕವರಿಗೆ ಅನ್ಯಾಯಿನುವುದಿಲ್ಲ. ಆದರೆ ಸರ್ಕಾರದ ಅಭಿಪ್ರಾಯದಲ್ಲಿ ಇವರ ಬಗ್ಗೆ ಏನಾದರೂ ರೋಪದೋಷಗಳೇನಾದರೂ ಕಂಡು ಬಂದರೆ, ಅಂತಹವರ ಮೇಲೆ ಟಿ. ಟಿ. ಹಾಕಿದಂಡ ವಸೂಲು ಮಾಡುವುದು ಉತ್ತಮವೆಂದು ನನಗೆ ತೋರುತ್ತದೆ.

Sri C. J. MUCKANNAPPA.—Shall I take it for granted that any man can go and occupy any land illegally and cultivate it for the purpose of making the grow more food campaign a success in the country ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ಒಂದು ಪಾಲಿಸಿ ಎಂದು ಹೇಳುವುದಕ್ಕಾಗುವದಿಲ್ಲ. Certain amount of latitude has been given in certain cases ಎಂದು ಹೇಳಿದೆ. ಎಲ್ಲೋ ಕೆಲವರು ಅರ್ಜಿ ಕೊಡುತ್ತಾರೆ. ಮುಂಗಾರು ಮಳೆ ಬಂದ ತಕ್ಷಣ ಅವರಿಗೆ ಅವರ ಅರ್ಜಿ ಪ್ರಕಾರ ಭೂ ಸಾಗುವಳಿಗಾಗಿ ಜಮೀನು ಮಂಜೂರುಮಾಡಬೇಕು. ಒಂದು ವೇಳೆ ಆ ರೀತಿ ಮಂಜೂರು ಆಗದಿದ್ದರೆ ಅವರು ಮತ್ತೆ ಕಾಯಬೇಕು. ಅದುವರೆಗೇನಾದರೂ ಈ ಮಳೆ ಹೋದರೆ, ಒಂದು ವರ್ಷ ಅವರಿಗೆ ಅನ್ಯಾಯವಾಗಿ ಹೋಗುತ್ತದೆ. ಆ ಸಮಯಕ್ಕೆ ಸರಿಯಾಗಿ ಉಳದೇ ಇದ್ದರೆ ಬಡಪಾಯಿಗೆ ಎಷ್ಟು ತೊಂದರೆಯಾಗುತ್ತದೆ ಎಂಬುದನ್ನು ತಿಳಿಯಬೇಕು. ಅಂತಹ ಕೇಸುಗಳು ಎಷ್ಟೋ ಇವೆ. ಅದೂ ಅಲ್ಲದೆ ಸರ್ಕಾರಿ ಗೋಮಾಳ ಜಮೀನು ಏನಾದರೂ ಇದ್ದರೆ ಆಗ ಅದನ್ನು ಲೀನಿಯಂಟಾಗಿ ನೋಡಬೇಕು ಎಂದು ಬೇರೆ ಹೇಳಿದೆ.

Constitution of State Beggars' Relief Committee.

*Q.—544. Smt. K. S. NAGARATHNAMMA (Gundlupet).—

Will the Government be pleased be state :—

(*a*) when the State Beggars' Relief Committee was constituted together with the names of Chairman and the members of the Committee ;

(*b*) the amount of expenditure incurred on this Committee for the last three years and the work turned out by the Committee ;

(*c*) whether there has been any such Committee in Mysore City since a long time ; and if so, the name of the person who was working as Chairman ;

(*d*) the additional expenditure incurred due to changing the Chairmanship of that Committee ?

A.—Sri R. M. PATIL (Minister for Home).—

(*a*) The Central Beggar Relief Committee was constituted on 30th August 1962. The names of the Chairman and the members of the Committee are mentioned in the statement appended hereto.

(*b*) 1.	1959-60	...	7-00
2.	1960-61	...	28-72
3.	1961-62	...	120-89

The work of the Committee is to supervise and control all matters relating to the administration of the Nirashrithara Parihara Kendra, Bangalore, and also matters relating to eradication of beggary in the State. The Committee is not an executive body by itself, but the Chairman of the Committee is an Executive Officer, who carries out the policy and measures approved by the Committee subject to the general orders of Government. The Commitee had, therefore, met several times during the last 3 years to review the activities of the institutions established under the Beggar Relief Act, to discuss policy matters and pass resolutions relating to the improvement of the institutions. The execution of the policy enunciated and the measures approved by the Committee from time

(SRI R. M. PATIL)

to time were carried out by the institutions concerned under the general control of the Chairman of the Committee.

(c) Yes.

The President, City Municipal Council, Mysore, was the Chairman of the Committee till 21st January 1961 and thereafter Sri B. N. Kenge Gowda was appointed as the Chairman.

(d) Nil.

Statement showing the names of the Chairman and Members of the Central Beggar Relief Committee, constituted in Government Notification No. HD34 BRR 62, dated 30th August 1962.

The Minister for Home ... Chairman.

Members:

1. The Mayor, City of Bangalore Municipal Corporation, Bangalore.
2. The President, City Municipal Council, Mysore.
3. The Inspector-General of Police in Mysore, Bangalore.
4. The Deputy Secretary to Government, Home Department.
5. The Inspector of Certfied Schools in Mysore, Bangalore.
6. The Director of Social Walfare in Mysore, Bangalore.
7. Sri B. Vasudeva Murthy, B.A.,LLB., Retired Mysore High Court Judge, Basavanagudi, Bangalore.
8. Sri V. P. Menon, 'Shelter' 31, Wheeler Road, Cookes Town, Bangalore-1.
9. Sri Jeenabhai Devidoss, Ex-Mayor of Bangalore, Chickpet, Bangalore.
10. Sri Mascarenhas, Ex-M. L. A., 125, Mysore Road, Bangalore.
11. Sri R. Subbanna, M. L. C. 22/4, 'Jayanivas' Seshadri Road, Bangalore.
12. Sri Enayuthalla Mekhri, Ex-Corporator, 12 Benson Road, Bangalore-1.
13. Mrs Mary G. Hoover, 24, IV Main Road, Chamarajpet, Bangalore-18
14. Smt. Premila Deshpande, Women's Wing, M. P. C. C. Office, Bangalore.
15. Smt. Tripurasundaramma Lankappa Ranasingpet, Bangalore.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ — ನನ್ನ (ಇ) ಪ್ರಶ್ನೆಗೆ ಉತ್ತರವಾಗಿ ಮೈನೂರಿನಲ್ಲಿ ಇಂತಹ ಒಂದು ಕಮಿಟಿ ಇದೆ. 1961 ನೇ ಜನವರಿ 21 ನೇ ತಾರೀಖಿನಿಂದ ಅಧ್ಯಕ್ಷರನ್ನು ಬದಲಾವಣೆ ಮಾಡಿದ್ದೇವೆಂದು ದಾಗಿ ಹೇಳಿದೆ. ಈ ರೀತಿಯಾಗಿ ಬದಲಾಯಿಸುವ ಪ್ರಮೇಯವೇನಿತ್ತು ?

ಶ್ರೀ ಆರ್. ಎಂ. ಪಾಟೀಲ್.—ಬದಲಾಯಿಸುವುದು ಅವಶ್ಯವೆನಿಸಿತು ಕಾರಣ ಬದಲಾಯಿಸಲಾಯಿತು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಅಷ್ಟು ಸುಲಭವಾಗಿ ಹೇಳುವುದಕ್ಕಾಗುವುದಿಲ್ಲ. ಅದರಲ್ಲಿ ಏನೋ ಬೇರೆ ರಾಜಕೀಯ ಇರಬಹುದು. ಈ ವಿಷಯದ ಬಗ್ಗೆ ಹಿಂದಿನ ಮತ್ತು ಈಗಿನ ಅಧ್ಯಕ್ಷರುಗಳಿಗೆ ಏನಾದರೂ ರಾಜಕೀಯವಿದ್ದು ಈ ರೀತಿ ಬದಲಾಯಿಸಲಾಯಿತೇ ?

ಶ್ರೀ ಆರ್. ಎಂ. ಪಾಟೀಲ್.— ರಾಜಕೀಯವಿದ್ದುದು ನನಗೆ ಗೊತ್ತಿಲ್ಲ. ಆ ರೀತಿಯೇನಾದರೂ ಇದ್ದರೆ ಎಗ್ಸಾಮಿನ್ ಮಾಡುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈ ರೀತಿಯ ಬದಲಾವಣೆಯಿಂದ ಚೇರ್‌ಮನ್ನರಿಗೆ ಏನೂ ಖರ್ಚು ಆಗಲಿಲ್ಲವೆಂದು ಉತ್ತರದಲ್ಲಿ ಹೇಳಿದ್ದೀರಿ. ಹಿಂದಿನ ಅಧ್ಯಕ್ಷರಿಗೆ ಕೊಡುತ್ತಿದ್ದ ಆನರೇರಿಯಂ ಎಷ್ಟು ? ಈಗಿನ ಅಧ್ಯಕ್ಷರಿಗೆ ಕೊಡುತ್ತಿದ್ದ ಆನರೇರಿಯಂ ಎಷ್ಟು ?

ಶ್ರೀ ಆರ್. ಎಂ. ಪಾಟೀಲ್.—ಹಿಂದಿನವರಿಗೆ ಆನರೇರಿಯಂ ಏನೂ ಇರಲಿಲ್ಲ. ಈಗಿನವರಿಗೆ ಕೊಡಬೇಕೆಂದು ಸರ್ಕಾರ ವಿಚಾರ ಮಾಡುತ್ತಿದೆ.

ಶ್ರೀ ಸಿ. ಆರ್. ರಂಗೇಗೌಡ.—(ಎ) ಪ್ರಶ್ನೆಗೆ ಉತ್ತರವಾಗಿ ಈ ಕಮಿಟಿಯನ್ನು 30-8-62 ರಲ್ಲಿ ರಚಿಸಲಾಯಿತು ಎಂದು ಹೇಳಿದ್ದೀರಿ. 1961 ನೇ ಜನವರಿ 21 ರವರೆಗೂ ಹಿಂದಿನವರು ಅಧ್ಯಕ್ಷರಾಗಿದ್ದ ಮೇಲೆ ಈಗಿನವರನ್ನು ನೇಮಿಸಲಾಗಿದೆ. ಅವರು 16-6-62 ಮತ್ತು 27-6-62 ತಾರೀಖುಗಳಲ್ಲಿ ಮೀಟಿಂಗ್‌ಗಳನ್ನು ಮಾಡಿದ್ದಾರೆ. ಈ ಕಮಿಟಿಗೆ ಮೂರು ವರ್ಷಗಳ ಅವಧಿ ಪೂರ್ತಿ ಇದ್ದರೂ ಈಗ ಇನ್ನೂ 18 ತಿಂಗಳು ಇದ್ದರೆ, 10-8-62 ರಲ್ಲಿಯೇ ಈ ಕಮಿಟಿಯನ್ನು ಡಿಸಾಲ್ವ್‌ಮಾಡಿ 30-8-62 ರಲ್ಲಿ ಬೇರೆ ಕಮಿಟಿಯನ್ನು ಸ್ಥಾಪನೆಮಾಡಿರುವ ಉದ್ದೇಶವೇನು ?

ಶ್ರೀ ಆರ್. ಎಂ. ಪಾಟೀಲ್.—ಈ ವಿಷಯ ಹೀಗಿದೆ. ಈ ಕಮಿಟಿಯಲ್ಲಿ ನರಿಯಾಗಿ ನಾಮಿನೇಟ್ ಆಗಿದ್ದಿಲ್ಲ. ಕಾರ್ಪೊರೇಷನ್ ಪ್ರಕಾರ ಈ ಕಮಿಟಿ ಕಾರ್ಯ ಕಲಾಪಗಳು ನಡೆಯುತ್ತಿದ್ದುವು. ಆದರೆ ಈಗ ಆ ರೂಲ್ ಬದಲಾವಣೆಯಾಗಿದ್ದರಿಂದ ಹೊಸ ಕಮಿಟಿಯನ್ನು

ಸ್ಥಾಪನೆ ಮಾಡಿದ್ದು, ಅಲ್ಲದೆ ಈ ಕಮಿಟಿಯಲ್ಲಿ ಸರಿಯಾಗಿ ಕಾರ್ಯ ಕಲಾಪಗಳು ನಡೆಯಲ. ಇದರಲ್ಲಿ ಯಾವ ರೀತಿಯ ಭಿನ್ನಾಭಿಪ್ರಾಯವೂ ಬರಬಾರದು ಎಂಬ ಉದ್ದೇಶದಿಂದ ಈಗ ಹೊಸದಾಗಿ ಕಮಿಟಿಯನ್ನು ರಚಿಸಲಾಯಿತು.

ಶ್ರೀ ಜಿ. ವಿ. ಗೌಡ.—ಮೈಸೂರು ಸಿಟಿ ಮುನಿಸಿಪಲ್ ಅಧ್ಯಕ್ಷರು ಚೇರ್‌ಮನ್ ಆಗಿರತಕ್ಕ ಕಮಿಟಿಯಲ್ಲಿ ಏನೂ ಖರ್ಚಾಗಲಿಲ್ಲ. ಬೇರೆಯವರು ಚೇರ್‌ಮನ್ ಆದಾಗ ಖರ್ಚುಮಾಡಬೇಕೆಂದು ಉದ್ದೇಶಪಟ್ಟ ಕಾರಣವೇನು ?

ಶ್ರೀ ಆರ್. ಎಂ. ಪಾಟೀಲ್.— ಖರ್ಚು ಮಾಡಬೇಕೆಂದಲ್ಲ. ಮೈಸೂರು ಸಿಟಿ ಮುನಿಸಿಪಲ್ ಪ್ರೆಸಿಡೆಂಟರಿಗೆ ಬಹಳ ಕೆಲಸವೆಂದು ಬೇರೆಯವರನ್ನು ನೇಮಕಮಾಡಿದ್ದು ಉಂಟು. ಆದರೆ ವ್ಯರ್ಥಾಖರ್ಚುಮಾಡಬೇಕೆಂಬ ಉದ್ದೇಶ ಸರ್ಕಾರಕ್ಕಿಲ್ಲ.

ಶ್ರೀ ಜಿ. ವಿ. ಗೌಡ.—ಹಾಗಾದರೆ ನನಗೆ ಬಹಳ ಕೆಲಸವಿದೆ. ಬೇರೆಯವರಿಗೆ ಈ ಹುದ್ದೆಯನ್ನು ಕೊಡಿ ಎಂದು ಮೈಸೂರು ಸಿಟಿ ಮುನಿಸಿಪಲ್ ಪ್ರೆಸಿಡೆಂಟರು ಪತ್ರವನ್ನೇನಾದರೂ ಸರ್ಕಾರಕ್ಕೆ ಕಳುಹಿಸಿದ್ದರೇ ?

ಶ್ರೀ ಆರ್. ಎಂ. ಪಾಟೀಲ್.—ಆ ಪ್ರಕಾರ ಕೆಲಸ ಅವರಿಗೆ ಹೆಚ್ಚಾಗಿದೆಯೆಂದು ನಾನು ಹೇಳಿದ್ದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಕಮಿಟಿಗಳನ್ನು ಸರ್ಕಾರ ರಚನೆಮಾಡುವಾಗ ಹೆಚ್ಚಿಗೆ ಕೆಲಸವಿರುವವರಿಗೆ ಕಡಮೆಮಾಡುವ ಉದ್ದೇಶವನ್ನು ಇಟ್ಟುಕೊಂಡಿರುವುದರಿಂದ ಈಗಿರತಕ್ಕ ನಾನಾ ಕಮಿಟಿಗಳಲ್ಲಿ 30-40-50 ಜನರಂತೆ ಮೆಂಬರುಗಳು ಇರುವುದರಿಂದ ಅದರ ಉದ್ದೇಶ ಇದಕ್ಕೂ ಅನ್ವಯವಾಗುವುದಿಲ್ಲವೇ ?

ಶ್ರೀ ಆರ್. ಎಂ. ಪಾಟೀಲ್.— ಕಮಿಟಿಯೊಳಗೆ ಯಾರ್ಯಾರನ್ನೋ ಸೇರಿಸುತ್ತಿದ್ದಾರೆಂಬ ಮಾತು ಬೇರೆ. ಜನ ಯಾವ ರೀತಿ ಕೆಲಸಮಾಡುವುದಕ್ಕೆ ಶಕ್ತಿವಂತರು ಇದ್ದಾರೆ ಎಂಬುದನ್ನು ನೋಡಿಕೊಂಡು ಚೆನ್ನಾಗಿ ದಕ್ಷತೆಯಿಂದ ಕೆಲಸಮಾಡುವವರನ್ನು ನೇಮಕ ಮಾಡುತ್ತಾರೆ. ಒಂದು ಕಮಿಟಿಯಲ್ಲಿ ಅವರು ಕೆಲಸಮಾಡಿದ್ದಾರೆಂದು ಅಷ್ಟಕ್ಕೇ ಅವರನ್ನು ಬಿಡುವುದಕ್ಕಾಗುವುದಿಲ್ಲ.

ಶ್ರೀ ಬಿ. ಕೆ. ಪುಟ್ಟಯ್ಯ.—ಈ ಕಮಿಟಿಯ ಹಿಂದಿನ ಅಧ್ಯಕ್ಷರಾಗಿದ್ದವರಿಗೆ ಏನೂ ಆನರೇರಿಯಂ ಕೊಡಲಿಲ್ಲವೆಂದು ಹೇಳಿದಿರಿ. ಅವರಿಗೆ ಕೇವಲ 50 ರೂಪಾಯಿಗಳನ್ನು ಕೊಡುತ್ತಿದ್ದರು ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆರ್. ಎಂ ಪಾಟೀಲ್.—ಅದು ಕರ್ಚವೆಯನ್ಸ್ ಅಲೊಯನ್ಸ್ ಕೊಡುತ್ತಿದರು.

ಶ್ರೀ ಬಿ ಹುಚ್ಚೇಗೌಡ.—(ಅ) ಪ್ರಶ್ನೆಗೆ ಉತ್ತರವಾಗಿ ಸಮಿತಿಗಾಗಿ 3 ವರ್ಷಗಳು ಖರ್ಚುಮಾಡಿದ ಹಣವನ್ನು ಹೇಳಿದ್ದೀರಿ. ಅವು ಯಾವ್ಯಾವ ಬಾಬಿನ ಖರ್ಚು ?

ಶ್ರೀ ಆರ್. ಎಂ. ಪಾಟೀಲ್.— ಅದು ಊಟದ ಬಾಬತ್ತು. ಆದರೆ ಅದು ಯಾವ ತರಹ ಊಟವೋ ಗೊತ್ತಿಲ್ಲ.

ಶ್ರೀ ಬಿ. ಚನ್ನಬೈರೇಗೌಡ.—ಹಿಂದೆ ಮಂತ್ರಿಗಳು ಉತ್ತರ ಹೇಳುವಾಗ ಮೈಸೂರು ಸಿಟಿಯಲ್ಲಿ ಕೇವಲ 8 ಜನ ಭಿಕ್ಷುಕರು ಮಾತ್ರ ಇದ್ದರೆಂದು ಹೇಳಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Sri R. M. PATIL.—Well, Sir, it is a matter of too much details. I want notice.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.— ಈಗ ಭಿಕ್ಷುಕರ ಕಾರೋನಿಯಲ್ಲಿರತಕ್ಕ ಭಿಕ್ಷುಕರು ಎಷ್ಟು ಜನ ?

ಶ್ರೀ ಆರ್. ಎಂ. ಪಾಟೀಲ್.—ಅದನ್ನು ವಿಚಾರಿಸಿಕೊಂಡು ಹೇಳುತ್ತೇನೆ.

1-30 P.M.

ಶ್ರೀ ಎಸ್. ಎಂ. ಕೃಷ್ಣ.—ನೀವು ಕೊಟ್ಟಿರತಕ್ಕ ಹೆಸರುಗಳಲ್ಲಿ ಒಂಬತ್ತರಿಂದ ಜಿನಾಭಾಯಿ ದೇವಿದಾಸ್ ಅವರ ಹೆಸರು ಪ್ರಾರಂಭವಾಗುತ್ತದೆ. ಅದರಲ್ಲಿ ಎಲ್ಲರೂ ಕಾಂಗ್ರೆಸ್ಸಿನವರೇ ಇದ್ದಾರೆ. ಉಳಿದ ಗುಂಪಿನವರಿಗೆ ಈ ವಿಚಾರದಲ್ಲಿ ಆಸಕ್ತಿಇಲ್ಲ ಎಂದು ಭಾವಿಸಿದ್ದೀರಾ ?

ಶ್ರೀ ಆರ್. ಎಂ. ಪಾಟೀಲ್.—ಅವರು Philanthropist ಭೂತದಯೆ ಇದ್ದವರು ಎಂದು ಅವರನ್ನು ಅದರಲ್ಲಿ ಹಾಕಿದ್ದೇವೆಯೇ ಹೊರತು, ಅವರನ್ನು ಕಾಂಗ್ರೆಸ್ಸಿನವರು ಎಂದು ಹಾಕಿಲ್ಲ.

ಶ್ರೀ ಎಸ್. ಶಿವಪ್ಪ.—ನಮ್ಮದೇಶದಲ್ಲಿ ಎಷ್ಟು ಜಾಯ ಭಿಕ್ಷುಕರಿದ್ದಾರೆ ?

ಶ್ರೀ ಆರ್. ಎಂ. ಪಾಟೀಲ್.—ಅದನ್ನು ಇಕ್ವೆಸ್ಟಿಗೇಟ್ ಮಾಡುವಕಾಲ ಇನ್ನೂ ಬಂದಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಭಿಕ್ಷುಕರ ರಿಲೀಫಿಗೆ ಸಂಬಂಧಪಟ್ಟ ಯೂನಿಫಾರ್ಮ್‌ಲೆಜಿಸ್ಲೇಷನ್‌ತರತಕ್ಕ ಯೋಚನೆ ಸರ್ಕಾರಕ್ಕೆ ಇದೆಯೇ ?

ಶ್ರೀ ಆರ್. ಎಂ. ಪಾಟೀಲ್.— ಇದೆ.

ಶ್ರೀ ಕೆ. ಲಕ್ಕಪ್ಪ.—ಭಿಕ್ಷುಕರ ಸಂಖ್ಯೆಗಿಂತ ನಾಮಿನೇಟ್ ಮಾಡಿರುವ ಸದಸ್ಯರೇ ಜಾಸ್ತಿ ಇದ್ದಾರೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Mr. SPEAKER.—That question was put and he said that he must get information.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.— ಭಿಕ್ಷುಕರಿಗೆ ಎಷ್ಟು ಖರ್ಚಾಗಿದೆ, ಕಮಿಟಿಗೋಸ್ಕರ ಎಷ್ಟು ಖರ್ಚಾಗಿದೆ, ಈ ಕಮಿಟಿಗೆ ಮೊದಲು ಅಧ್ಯಕ್ಷರಾಗಿದ್ದವರಿಗೆ ಕೆಲಸ ಜಾಸ್ತಿಯೆಂದು ಅವರನ್ನು ಬದಲಾಯಿಸಿದೆ ಎಂದು ಹೇಳಿದಿರಿ. 30-40 ಕಮಿಟಿಗಳಿಗೆ ಶ್ರೀಮಾನ್ ಜಿನಾಭಾಯ್ ದೇವದಾಸ್ ಅವರು ಸದಸ್ಯರಾಗಿದ್ದಾರೆ, ಅವರು ಯಾವುದರಲ್ಲಿ ಎಕ್ಸ್‌ಸ್ಯ್ವಾ ಪರಿಣತರಾಗಿದ್ದಾರೆ ?

Mr. SPEAKER.— Answer only the first supplementary, under the guise of putting a supplementary, the Hon'ble member is cultivating the habit of clubbing half adozen supplementaries.

ಶ್ರೀ ಆರ್. ಎಂ. ಪಾಟೀಲ್.—ಎಲ್ಲಾಕೂಡಿಕೊಂಡು ಕೇಳಿದರು. ಅವರುಕೇಳಿದಪ್ರಶ್ನೆ ಫಸ್ಟ್‌ಯಾವುದು ಸೆಕೆಂಡ್‌ಯಾವುದು ಎಂಬುದು ಗೊತ್ತಾಗಲಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಭಿಕ್ಷುಕರಿಗೆ ಎಷ್ಟು ಖರ್ಚಾಗಿದೆ ?

ಶ್ರೀ ಆರ್. ಎಂ. ಪಾಟೀಲ್.—ಒಂದು ಲಕ್ಷ ಅರವತ್ತೈದು ಸಾವಿರ ರೂಪಾಯಿಗಳು ಖರ್ಚಾಗಿವೆ.

ಶ್ರೀ ಬಿ. ಹುಚ್ಚೇಗೌಡ.—ಈ ಭಿಕ್ಷುಕರಿಗೆ ಸಂಬಂಧಪಟ್ಟಬಿಲ್ ಬಂದರಾಗಾಯ್ತು ನಿಂದಲೂ ನಾನುನೋಡುತ್ತಿದ್ದೇನೆ, ಈ ಭಿಕ್ಷುಕರುಗಳ ಪರಿಹಾರಸಮಿತಿಯ ಪ್ರೆಸಿಡೆಂಟ್ ಮತ್ತು ಸೆಕ್ರೆಟರಿಗಳನ್ನು ಸರ್ಕಾರದವರು ಫೀಡ್ ಮಾಡುತ್ತಿದ್ದಾರೆ. ಈಗಲೂ ಅದೇರೀತಿ ಪ್ರೆಸಿಡೆಂಟರು ಮತ್ತು ಸೆಕ್ರೆಟರಿಗಳನ್ನು ಫೀಡ್‌ಮಾಡುತ್ತಿದ್ದೀರಾ ಅಥವಾ ಬೇರೆಯವರನ್ನು ಫೀಡ್‌ಮಾಡುತ್ತಿದ್ದೀರಾ ?

ಶ್ರೀ ಆರ್. ಎಂ. ಪಾಟೀಲ್.—ಫೀಡ್ ಮಾಡುವುದು ಏನೂ ಗೊತ್ತಿಲ್ಲ.

Sri B. HUTCHE GOWDA.—How many beggars are fed?

Mr. SPEAKER.—They are suggesting that no beggar is fed and the President and the Secretary are only fed. It can never be like that.

Sri R. M. PATIL.—The present number of beggars is more then 400 or so. The inmates are between 200 and 400.

Construction of a Bridge to connect Nanjangud town and Hejjige.

*Q.—559. Sri N. RACHAIAH (Nanjangud).

will the Government be pleased to state:—

whether they intend to construct a bridge to connect Nanjangud town and Hejjige directly?

A.—Sri KONDAJJIBASAPPA (Deputy Minister for Co-operation) [on behalf of Sri VEERENDRA PATIL (Minister for Public Works)].—

No.

ಶ್ರೀ ಎನ್. ರಾಚಯ್ಯ.—ನಂಜನಗೂಡು ಟೌನ್ ಮತ್ತು ಹೆಜ್ಜಿಗೆ ಇವುಗಳಿಗೆ ನೇರವಾಗಿ ಸಂಪರ್ಕವನ್ನು ಉಂಟುಮಾಡುವ ನಲುವಾಗಿ ಒಂದು ಸೇತುವೆಯನ್ನು ನಿರ್ಮಿಸಲು ಸರ್ಕಾರದವರು ಉದ್ದೇಶಿಸಿರುವರೇ?

†ಶ್ರೀ ಕೊಂಡಜ್ಜಿ ಬಸಪ್ಪ.—ಅದಕ್ಕೆ ಉತ್ತರ ಹೇಳಿದೆ. 1957ನೇ ಇಸವಿಯಿಂದ ಅಲ್ಲಿ ಒಂದು ಪುಟ್ ಬ್ರಿಡ್ಜ್ ಕಟ್ಟಿಕೊಡಿ ಅಲ್ಲಿ ನೇರವಾದ ಸಂಪರ್ಕ ಇರಬೇಕೆಂದು ಅಲ್ಲಿನ ಜನಗಳು ಹೇಳುತ್ತಾ ಇದ್ದರು. ಸಾಧಾರಣವಾಗಿ ಅಲ್ಲಿ ಹೆವಿಫ್ಲಡ್ ಬರುತ್ತದೆ, ಆದ್ದರಿಂದ ಅಲ್ಲಿ ಪುಟ್‌ಬ್ರಿಡ್ಜ್ ಕಟ್ಟಿದರೆ ಅದು ತಡೆಯುವುದಿಲ್ಲ ಎಂದು ತೀರ್ಮಾನ ಮಾಡಿದೆ.

ಶ್ರೀ ಎನ್. ರಾಚಯ್ಯ.—ಅಲ್ಲಿ ಸೇತುವೆಯನ್ನು ಕಟ್ಟುವುದರಿಂದ 20-30 ಗ್ರಾಮಗಳಿಗೆ ಸಾಕಾರ್ಯವಾಗುತ್ತದೆ ಎಂದು ಆ ಸೇತುವೆಗೆ ಎಸ್ಟಿಮೇಟ್ ತಯಾರಾಗಿ ಆ ಕೆಲಸ ನಿಂತಿರುವುದಕ್ಕೆ ಕಾರಣವೇನು?

ಶ್ರೀ ಕೊಂಡಜ್ಜಿ ಬಸಪ್ಪ. ಅದರ ಎಸ್ಟಿಮೇಟ್ ಮಾಡಿಲ್ಲ. 1957ನೇ ಇಸವಿಯಲ್ಲಿ ಇಂಜಿನಿಯರುಗಳು ಅಲ್ಲಿಗೆ ಹೋಗಿ ಪ್ರಿಲಿಮಿನರಿ ಇನ್‌ವೆಸ್ಟಿಗೇಷನ್ ಮಾಡಿ ಅದು ಸಾಧುವಾದ್ದಲ್ಲ, ಒಂದೂವರೆ ಮೈಲಿದೂರ ಇಲ್ಲ ಒಂದು ದೊಡ್ಡ ಸೇತುವೆ ಇದೆ, ಸ್ವಲ್ಪದೂರ ಸುತ್ತು ವರಿದುಕೊಂಡು ಆ ಸೇತುವೆಯಮೇಲೆ ಬರುವುದಕ್ಕೆ ಸಾಧ್ಯವಿದೆ, ಮೂರೂವರೆ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಒಂದು ಪುಟ್‌ಬ್ರಿಡ್ಜ್ ಕಟ್ಟುವುದು ಅನಾವಶ್ಯಕವೆಂದು ಚೀಫ್ ಇಂಜಿನಿಯರು ತೀರ್ಮಾನ ಮಾಡಿದ್ದಾರೆ.

ಶ್ರೀ ಕೆ. ಎನ್. ಸೂರ್ಯನಾರಾಯಣರಾವ್.—ನಂಜನಗೂಡು ಟೌನ್ ಮತ್ತು ಹೆಜ್ಜಿಗೆ ಬರಬೇಕಾದರೆ ಜನಗಳು ಮತ್ತು ಗಾಡಿಗಳು ಹೊಳೆಯನ್ನು ಹಾಯ್ದುಕೊಂಡು ಬರುತ್ತಿವೆ. ಫ್ಲಡ್ಸ್ ಬಂದರೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಅಲ್ಲಿ ಬ್ರಿಡ್ಜ್ ಹಾಕಬೇಕು ಎಂದು ಅಲ್ಲಿನ ಜನಗಳಿಂದ ಸರ್ಕಾರಕ್ಕೆ ಒತ್ತಾಯ ಬರಲಿಲ್ಲವೇ?

ಶ್ರೀ ಕೊಂಡಜ್ಜಿ ಬಸಪ್ಪ.—ಅದು ಸರ್ಕಾರದ ಗಮನಕ್ಕೆ ಬಂದಿಲ್ಲ. ಮಾನ್ಯ ಸದಸ್ಯರ ಮೂಲಕವೇ ಈಗ ಬಂದಿರುವುದು. ಅದನ್ನು ಪುನರ್ವಿಮರ್ಶೆ ಮಾಡಬೇಕಾದರೆ ಮಾಡಬಹುದು.

Grant of Voluntary Welfare Institutions.

*Q.—635. Sri P. F. D'MELLOW (Nominated).—

Will the Government be pleased to state:—

(*a*) whether they are aware that certain long established and recognised voluntary welfare institutions, which provide for the care of the aged, infirm and destitute are urging for several years for the restoration of Government grants to a level more in keeping with their established needs, and the steep rise in the cost of both the maintenance and feeding of their inmates;

(*b*) whether they are aware that in some cases, the grant actually made available to such charitable institutions is only slightly above fifty per cent of the amount provided for and voted dy the State Legislature in the year 1961-62;

(*c*) whether they intend to order suitable relief to all such institutons by making available the whole of the amount voted for these institutions by the State Legislature by way of grants-in-aid for 1962-63?

A.—Sri B. D. JATTI (Minister for Finance).—

(*a*) Yes, in the case of one or two institutions. It was not possible for Government to comply to their requests in view of the stringent financial difficulties. It is true that due to increase in the number of inmates and the rise in the cost of both maintenace and feeding

†Indicates that the remarks or speeches have not been revised by the member concerned.